**7.1.9:** ***Sensitization of students and employees of the Institution to the constitutional obligations: values, rights, duties and responsibilities of citizens***



ವಿಜಯ ಕರ್ನಾಟಕ 17-1-2023

# ಇತಿಹಾಸದ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು




ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ.ಎನ್.ಎಸ್. ತಾರಾನಾಥ್, ಪ್ರೊ.ನಂಜಯ್ಯ ಹೊಂಗನೂರು, ಪ್ರೊ. ಜಿ.ವಿ. ಸಾಂಬಶಿವಯ್ಯ, ಕೆ.ಪಿ. ಲಲಿತ ಭಾಗವಹಿಸಿದ್ದರು.

**ವಿಕ ಸುದ್ದಿಲೋಕ** ಮೈಸೂರು

ಶಾಸನಗಳೆಂದರೆ ಬರಹಗಳನ್ನು ಓದುವ ಶಾಸ್ತ್ರ. ಈಜಿಪ್ಟ್, ಭಾರತ, ಚೀನಾ ಇವೇ ಮೊದಲಾದ ದೇಶಗಳಲ್ಲಿ ಚಾರಿತ್ರಿಕ ಸಾಮಗ್ರಿಗಳು ದೊರೆತಿವೆ ಎಂದು ಪ್ರೊ.ಎನ್. ಎಸ್. ತಾರಾನಾಥ್ ಅವರು ಅಭಿಪ್ರಾಯ ಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಮತ್ತು ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಪ್ರಚಾರೋಪನ್ಯಾಸ ಮಾಲೆಯ ಭಾಗವಾಗಿ ಏರ್ಪಡಿಸಲಾಗಿದ್ದ ಶಾಸನಗಳ ಮಹತ್ವವನ್ನು ಕುರಿತಾದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

''ನಾಣ್ಯಗಳು, ಶಿಲ್ಪ, ತಾಮ್ರಪಟಗಳಲ್ಲಿ ಮೌಖಿಕ ಇತಿಹಾಸದ ಘಟನೆಗಳಷ್ಟೇ ಇರುತ್ತವೆ. ಕಾಲದ ನಿಖರತೆಯನ್ನು ಅವು ತಿಳಿಸುವುದಿಲ್ಲ. ಶಾಸನಗಳು ನಂಬಲರ್ಹವಾದ ವಿಚಾರಗಳನ್ನಷ್ಟೇ ನೀಡುತ್ತವೆ. ಆದ್ದರಿಂದ ಇತಿಹಾಸ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು'' ಎಂದು ತಿಳಿಸಿದರು.

''ಇತಿಹಾಸದಲ್ಲಿ ಉತ್ಪ್ರೇಕ್ಷೆಯ ಅಂಶಗಳು ಇರುವ ಸಾಧ್ಯತೆಗಳಿವೆ. ಅದೇ ಶಾಸನಗಳಲ್ಲಿ ಉತ್ಪ್ರೇಕ್ಷೆಯ ಅಂಶಗಳು ಕಂಡು ಬರುವುದಿಲ್ಲ. ಪ್ರತ್ಯಕ್ಷವಾದ ಕುರುಹುಗಳೇ ಇರುತ್ತವೆ. ಶಾಸನಗಳನ್ನು ಬರೆಸಲು ಅಧಿಕೃತ ಒಪ್ಪಿಗೆ ಇರಬೇಕು. ಒಂದು ರೀತಿಯಲ್ಲಿ ಶಾಸನಗಳು ಸಾರ್ವಜನಿಕ ಪ್ರಕಟಣೆ ಇದ್ದಂತೆ. ಆದ್ದರಿಂದಲೇ ಭಾರತದ ಚರಿತ್ರೆಯ ರಚನೆಯಲ್ಲಿ ಶಾಸನಗಳ ಪಾತ್ರ ಮಹತ್ತರವಾದದ್ದು. ಶಾಸನಗಳು ದೊರೆಯದೆ ಇದ್ದಿದ್ದರೆ ಇಂದು ನಮಗೆ ಅನೇಕ ಮಹತ್ವದ ವಿಚಾರಗಳು ದೊರೆಯುತ್ತಿರಲಿಲ್ಲ. ಶಾಸನಗಳು ಸಮಾಜದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳು, ಶಿಲ್ಪ, ತಾಮ್ರಪಟ ಮುಂತಾದವುಗಳಲ್ಲಿ ಶಾಸನಗಳು ರಚನೆಯಾಗಿವೆ,'' ಎಂದರು.

ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಜಿ.ವಿ. ಸಾಂಬಶಿವಯ್ಯ ವಹಿಸಿದ್ದರು. ಪ್ರಸಾರಾಂಗದ ಉಪ ನಿರ್ದೇಶಕಿ ಕೆ.ಪಿ. ಲಲಿತ ಸೇರಿದಂತೆ ಇತರರು ಇದ್ದರು.

ಪ್ರತಿನಿಧಿ 26-1-2023

# ರಾಷ್ಟ್ರೀಯ ಮತದಾರರ ದಿನಾಚರಣೆ



ಪ್ರತಿನಿಧಿ ಫೋಟೋ

ಮೈಸೂರು: ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬುಧವಾರ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ಪ್ರಾಂಶುಪಾಲ ಪ್ರೊ.ಎಂ.ಪಿ.ವಿಜಯೇಂದ್ರ ಕುಮಾರ್ ಮಾತನಾಡಿ, ರಾಷ್ಟ್ರೀಯ ಮತದಾರರ ದಿನಾಚರಣೆಯ ಹಿನ್ನೆಲೆ ಹಾಗೂ ಮಹತ್ವವನ್ನು ತಿಳಿಸಿದರು. ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಪ್ರೊ. ಬಿ.ವಿ.ಸಾಂಬಶಿವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಆರ್. ಜಿ.ಆಶಾ ವಂದಿಸಿದರು. ಕಾಲೇಜಿನ ನೌಕರ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠ

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಸ್ವಾಯತ್ತ, 'ಎ' ದರ್ಜೆ ಹಾಗೂ ಅಂತಸ್ಸಮರ್ಥ ಉತ್ಕೃಷ್ಟತಾ ಕಾಲೇಜು

## ಜೆಎಸ್‌ಎಸ್ ಪದವಿಪೂರ್ವ ಕಾಲೇಜು

ಊಟಿ ರಸ್ತೆ, ಮೈಸೂರು – 570025

# 74ನೇ

# ಗಣರಾಜ್ಯೋತ್ಸವ ದಿನಾಚರಣೆ

26 ಜನವರಿ 2023

ಬೆಳಗ್ಗೆ 8.30

ಧ್ವಜಾರೋಹಣ

**ಪ್ರೊ. ಬಿ.ವಿ. ಸಾಂಬಶಿವಯ್ಯ**

ಮುಖ್ಯ ಕಾರ್ಯನಿರ್ವಾಹಕರು

ಮುಖ್ಯ ಅತಿಥಿಗಳು

**ಡಾ. ಎಸ್.ಎಸ್. ಜಾಹ್ನವಿ**

ಕಾನೂನು ವಿಭಾಗ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು

ಉಪಸ್ಥಿತರು

**ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್**

ಪ್ರಾಂಶುಪಾಲರು

ಜೆಎಸ್‌ಎಸ್ ಪದವಿ ಕಾಲೇಜು

**ಶ್ರೀ ಎಸ್. ಸೋಮಶೇಖರ**

ಪ್ರಾಂಶುಪಾಲರು

ಜೆಎಸ್‌ಎಸ್ ಪದವಿಪೂರ್ವ ಕಾಲೇಜು

**ಡಾ. ಎಲ್. ವಿನಯ್‌ಕುಮಾರ್**

ಸಂಚಾಲಕರು, ರಾಷ್ಟ್ರೀಯ ಹಬ್ಬಗಳ ಸಮಿತಿ

*** ಸರ್ವರಿಗೂ ಆತ್ಮೀಯ ಸ್ವಾಗತ ***

ಕನ್ನಡ ಪ್ರಭ 27-1-2023

# ಪ್ರಜಾಪ್ರಭುತ್ವ ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲಾಗಿದೆ: ಡಾ.ಜಾಹ್ನವಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತದಲ್ಲಿ ಹಲವು ಧರ್ಮ, ಜಾತಿ, ಜನಾಂಗ, ಭಾಷೆಗಳಿದ್ದು, ಹಲವು ಸವಾಲುಗಳಿದ್ದರೂ ಪ್ರಜಾಪ್ರಭುತ್ವವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ಕಾನೂನು ವಿಭಾಗದ ಡಾ.ಎಸ್.ಎಸ್. ಜಾಹ್ನವಿ ಹೇಳಿದರು.

ಊಟಿ ರಸ್ತೆಯ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಶ್ರೇಷ್ಠವಾಗಿದೆ. ನಮ್ಮ ಹಕ್ಕು, ಕರ್ತವ್ಯ, ಕಾನೂನು, ನಮ್ಮ ವ್ಯವಹಾರಗಳು ಮತ್ತು ನಮ್ಮ ನಡವಳಿಕೆಯ ಬಗ್ಗೆ ನಮಗೆ ಅರಿವು ಮತ್ತು ಎಚ್ಚರವಿರಬೇಕು. ನಮ್ಮ ಹಕ್ಕುಗಳನ್ನು ನಾವೇ ರಕ್ಷಿಸಿಕೊಳ್ಳಬೇಕು. ಇದನ್ನು ರಕ್ಷಿಸಿಕೊಳ್ಳುವುದಕ್ಕೆ ಮೌಲ್ಯಯುತ ಶಿಕ್ಷಣ ಬೇಕು ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್ ಸ್ವಾಗತಿಸಿದರು. ಪಿಯು ಕಾಲೇಜು ಪ್ರಾಂಶುಪಾಲ ಎಸ್. ಸೋಮಶೇಖರ್ ವಂದಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಲ್. ವಿನಯ್‌ಕುಮಾರ್ ನಿರೂಪಿಸಿದರು.

74ನೇ ಗಣರಾಜ್ಯೋತ್ಸವ ದಿನಾಚರಣೆಯ ಉದ್ಘಾಟನಾ ಸಮಾರಂಭ

26-01-2023




ಹುತಾತ್ಮರ ದಿನಾಚರಣೆಯ ಉದ್ಘಾಟನಾ ಸಮಾರಂಭದ ಕಾರ್ಯಕ್ರಮ

30-01-2023



ಕನ್ನಡ ಪ್ರಭ 1-2-2023

# ಜಗತ್ತಿನಲ್ಲಿಯೇ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಗಳಿಸಿದ್ದು ಭಾರತ ದೇಶ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸೋಮವಾರ ಹುತಾತ್ಮರ ದಿನವನ್ನು ಆಚರಿಸಲಾಯಿತು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಅವರು ಸರ್ವಧರ್ಮ ಸಂಕರ್ಷಣಾ ಪ್ರತಿಜ್ಞೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು.

ಇತಿಹಾಸ ವಿಭಾಗದ ಮುಖ್ಯಸ್ಥೆ ಆರ್. ಸುಜಾತಾ ಕುಮಾರಿ ಮಾತನಾಡಿ, ಮಹಾತ್ಮ ಗಾಂಧೀಜಿ ಈ ಜಗತ್ತೇ ಕಂಡರಿಯದ ಅಪೂರ್ವ ವ್ಯಕ್ತಿ. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರು ವಹಿಸಿದ ಪಾತ್ರ ಅವಿಸ್ಮರಣೀಯವಾದುದು. ಗಾಂಧಿಯವರ ಮೂಲ ತತ್ವಗಳಾದ ಸತ್ಯ, ಅಹಿಂಸೆ ಮತ್ತು ಜನಾಂಗಗಳ ಸಾಮರಸ್ಯಗಳಂತಹ ಆದರ್ಶಗಳನ್ನು ನಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳುವುದೇ, ನಾವು ಅವರಿಗೆ ನಿರ್ಮಿಸುವ ಯೋಗ್ಯ ಸ್ಮಾರಕವಾಗಿದೆ ಎಂದು ಹೇಳಿದರು.

ನಾವೇ ಶ್ರೇಷ್ಠರು ಮತ್ತು ಅಜೇಯರು ಎಂದು ಭಾವಿಸಿದ್ದ ಬ್ರಿಟೀಷರನ್ನೂ ಕೇವಲ ಸತ್ಯಾಗ್ರಹ ಎಂಬ ಆತ್ಮ ಬಲದಿಂದ ಮಣಿಸಿ, ನಮಗೆಲ್ಲ ಸ್ವಾತಂತ್ರ್ಯ ತಂದು ಕೊಟ್ಟರು. ಜಗತ್ತಿನಲ್ಲಿ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಗಳಿಸಿದ್ದು ಭಾರತವೊಂದೇ. ಆ ಶ್ರೇಯಸ್ಸು ಗಾಂಧೀಜಿಗೆ ಸಲ್ಲಬೇಕು ಎಂದು ಅವರು ತಿಳಿಸಿದರು.

ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸೋಮಶೇಖರ್, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಆರ್.ಜಿ. ಆಶಾ, ಸಹಾಯಕ ಪ್ರಾಧ್ಯಾಪಕ ಎಂ.ಪಿ. ಮಹದೇವಸ್ವಾಮಿ ಇದ್ದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ಘಾಟನಾ ಸಮಾರಂಭ

12-04-2023



ನಿಜದನಿ 14-4-2023

# ಲಿಂಗಸಮಾನತೆಯಲ್ಲಿ ಡಿಜಿಟಲ್ ಮಾಧ್ಯಮಗಳ ಪಾತ್ರ ಮಹತ್ವದ್ದು




ಮೈಸೂರು: ಡಿಜಿಟಲ್ ತಂತ್ರಜ್ಞಾನ ಇಂದು ವ್ಯಾಪಕವಾಗಿ ಬೆಳೆಯುತ್ತಿದ್ದು, ಪಾಲ್ಗೊಳ್ಳುವಿಕೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಇದರಲ್ಲಿ ಸಕ್ರಿಯವಾಗಿ ಮಹಿಳೆಯರು ತೊಡಗಿಸಿಕೊಂಡು ಸಬಲೀಕರಣದ ಕಡೆ ಸಾಗಬೇಕು. ಇಂದು ಡಿಜಿಟಲ್ ಮಾಧ್ಯಮಗಳು ಲಿಂಗಸಮಾನತೆ ತರುವಲ್ಲಿ ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿವೆ. ಹೀಗಾಗಿ ಇದರಲ್ಲಿ ಮಹಿಳೆಯರು ಶೈಕ್ಷಣಿಕ ಮತ್ತು ವ್ಯಾವಹಾರಿಕ ದೃಷ್ಟಿಕೋನದಿಂದ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಬೇಕು ಎಂದು ಮೈಸೂರಿನ ಪ್ರೊಸೆಟ್ಟಾ ಬಯೋಕಾನ್ ಫಾರ್ಮಾಟಿಕ್ಸ್ ಪ್ರೈ.ಲಿ ಸಿ.ಇ.ಓ ಮತ್ತು ಮುಖ್ಯ ವಿಜ್ಞಾನಿ ಡಾ.ಎಂ. ಧರ್ಮಪ್ರಸಾದ್ ಹೇಳಿದರು.

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ 2023ರ ಅಂತಾರಾಷ್ಟ್ರೀಯ ಮಹಿಳಾ ದಿನಾಚಾರಣೆಯ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಆಗಮಿಸಿ ಮಾತನಾಡಿದ ಅವರು, ಇಂದು ಮಹಿಳೆಯರ ಸ್ಥಾನಮಾನಗಳು ಬದಲಾಗಿವೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಭಾಗವಹಿಸುತ್ತಿದ್ದಾರೆ. ಬಹುತೇಕ ಕಡೆ ಮಹಿಳೆಯರ ಭಾಗಿತ್ವವೇ ಪ್ರಧಾನವಾಗಿ ಕಂಡುಬರುತ್ತಿದೆ. ಇದು ಆಶಾದಾಯಕವಾದ ಬೆಳವಣಿಗೆ. ಇದರಂತೆ ಡಿಜಿಟಲ್ ಮಾಧ್ಯಮದಲ್ಲಿಯೂ ಅವರ ಭಾಗಿತ್ವ ಪ್ರಧಾನವಾಗಿ ಮತ್ತು ಹೆಚ್ಚಿನ ಪ್ರಮಾನದಲ್ಲಿ ಕಂಡುಬರಬೇಕು. ಇದು ಲಿಂಗಸಮಾನತೆಗೆ ಪೂರಕವಾಗಿರುತ್ತದೆ ಎಂದು ಹೇಳಿದರು.

ಮೈಸೂರಿನ ಆರ್‌ಪ್ರೋಸಸ್ ಔಟ್‌ಸೋರ್ಸಿಂಗ್ ಸರ್ವಿಸ್ಸ್ ಪ್ರೈ.ಲಿ.ನ ಸಿಇಓ ಸವಿತಾ ಮಲ್ಲಪ್ಪ ಮಾತನಾಡಿ, ಡಿಜಿಟಲ್ ಮಾಧ್ಯಮಗಳನ್ನು ಮನರಂಜನೆಯ ಉದ್ದೇಶಕ್ಕಾಗಿಯೇ ಹೆಚ್ಚಾಗಿ ಬಳಸದೆ, ಶೈಕ್ಷಣಿಕ, ಆರೋಗ್ಯ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಬಳಸಿ. ಡಿಜಿಟಿಲ್ ತಂತ್ರಜ್ಞಾನವನ್ನು ಮಹಿಳೆಯರ ಬಳಕೆಗೆ ಹೆಚ್ಚು ಅನುಕೂಲವಾಗುವಂತೆ ಮತ್ತು ಸುಲಭವಾಗುವಂತೆ ಹೊಂದಿಸಲಾಗುತ್ತಿದೆ. ಅದರ ಸದ್ಬಲಕೆಯನ್ನು ಪಡೆದುಕೊಳ್ಳಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಮಾತನಾಡಿ, ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲಿಯೂ ತನ್ನ ಅನನ್ಯತೆಯನ್ನು ಸಾಧಿಸಿ ತೋರಿಸುತ್ತಿದ್ದಾರೆ. ಇದು ಸಮಾಜದಲ್ಲಿ ಮಹಿಳೆಯರು ಸಬಲೀಕರಣಗೊಳ್ಳುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿ. ಗಂಡು ಮತ್ತು ಹೆಣ್ಣಿನ ನಡುವೆ ಇರುವ ವ್ಯತ್ಯಾಸ ಕೇವಲ ಜೈವಿಕ ನೆಲೆಯದ್ದು. ಅದನ್ನು ಹೊರತು ಪಡಿಸಿದರೆ ಗಂಡು ಮತ್ತು ಹೆಣ್ಣಿನ ನಡುವೆ ಯಾವುದೇ ವ್ಯತ್ಯಾಸಗಳನ್ನು ಗುರುತಿಸಿ ತಾರತಮ್ಯ ಮಾಡುವಂತಿಲ್ಲ. ಸಮಾಜದ ಆರೋಗ್ಯಕರ ಬೆಳವಣಿಗೆಯಲ್ಲಿ ಪುರುಷನಷ್ಟೇ ಸಮಾನವಾದ ಪಾತ್ರವನ್ನು ಮಹಿಳೆ ವಹಿಸಿದ್ದಾರೆ. ನಮ್ಮ ಕಾಲೇಜಿನಲ್ಲಿ ಬೋಧಕವರ್ಗ ಮತ್ತು ವಿದ್ಯಾರ್ಥಿಗಳ ಲಿಂಗ ಅನುಪಾತದಲ್ಲಿ ಮಹಿಳೆಯರ ಪ್ರಮಾಣ ಕ್ರಮವಾಗಿ ಶೇ.49 ಮತ್ತು ಶೇ.46 ಇದ್ದು ಮಾದರಿಯಾಗಿದೆ. 2050ರ ವೇಳೆಗೆ ಶೇ.75ರಷ್ಟು ಉದ್ಯೋಗಗಳು ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್ ಮತ್ತು ಗಣಿತಶಾಸ್ತ್ರಕ್ಕೆ ಸಂಬಂಧಿಸಿವೆ. ಇವುಗಳಲ್ಲಿ ಭಾಗಿತ್ವ ಹೆಚ್ಚಾಗಲು ಡಿಜಿಟಲ್ ಮಾಧ್ಯಮದಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಪಿ.ವಿಜಯೇಂದ್ರ ಕುಮಾರ್ ಸೇರಿದಂತೆ ಹಲವರು ಇದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

ಸ್ವಾಯತ್ತ 'ಎ' ದರ್ಜೆ ಹಾಗೂ ಅಂತಸ್ಸಮರ್ಥ ಉತ್ಕೃಷ್ಟತಾ ಕಾಲೇಜು

ಊಟಿ ರಸ್ತೆ, ಮೈಸೂರು 570 025

## ಕನ್ನಡ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗ

## ರಾಜ್ಯಮಟ್ಟದ ಚರ್ಚಾ, ಪ್ರಬಂಧ ಮತ್ತು ವಚನಗಳ ಓದು–ವ್ಯಾಖ್ಯಾನ ಸ್ಪರ್ಧೆಗಳು

ಆಶೀರ್ವಾದದೊಂದಿಗೆ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ಮಠ

ಶ್ರೀ ಸುತ್ತೂರು ಕ್ಷೇತ್ರ

ಉದ್ಘಾಟನೆ

**ಡಾ. ಎಸ್ ಪಿ ಉಮಾದೇವಿ**

ಸಾಹಿತಿಗಳು ಮತ್ತು ವಿಶ್ರಾಂತ ಕನ್ನಡ ಪ್ರಾಧ್ಯಾಪಕರು

ಮೈಸೂರು

ಅಧ್ಯಕ್ಷತೆ

**ಪ್ರೊ. ಬಿ ವಿ ಸಾಂಬಶಿವಯ್ಯ**

ಮುಖ್ಯ ಕಾರ್ಯನಿರ್ವಾಹಕರು

ಉಪಸ್ಥಿತರು

**ಪ್ರೊ. ಎಂ ಪಿ ವಿಜಯೇಂದ್ರ ಕುಮಾರ್**

ಪ್ರಾಂಶುಪಾಲರು

27 ಜೂನ್ 2023, ಮಂಗಳವಾರ — ಬೆಳಗ್ಗೆ 10.30

## ತಮಗೆ ಆದರದ ಸ್ವಾಗತ

ಸಂಚಾಲಕರು

ಡಾ. ಎನ್ ಮಹೇಶ್ವರಿ

ಡಾ. ಬಿ ಎಸ್ ಸುದೀಪ್

ಅಧ್ಯಾಪಕರು ಮತ್ತು ಅಧ್ಯಾಪಕೇತರರು

**ಸ್ಥಳ: ಕಾಲೇಜಿನ ಸಭಾಂಗಣ**

ರಾಜ್ಯ ಮಟ್ಟದ ಚರ್ಚೆ, ಪ್ರಬಂಧ ಮತ್ತು ವಚನಗಳ ಓದು ವ್ಯಾಖ್ಯಾನ ಸ್ಪರ್ಧೆ ಉದ್ಘಾಟನೆ.

27-06-2023

